

## ವೈದ್ಯ ವೃತ್ತಿಗೆ ಆದರ್ಶದ ಮುನ್ನುಡಿ

ವೈದ್ಯಕೀಯ ವೃತ್ತಿ ವ್ಯಾಪಾರೀಕರಣಗೊಂಡಿದೆ. ಸಾಮಾನ್ಯವಾಗಿ ಹಣ ಇದ್ದವರಿಗೆ ಉತ್ತಮ ಚಿಕಿತ್ಸೆ ಎನ್ನುವಂತೆ ಆಗಿದೆ. ಜನಸಾಮಾನ್ಯರ ಪಾಲಿಗೆ 'ವೈದ್ಯೋನಾರಾಯಣ ಹರಿ' ಎಂದು ಅನ್ನಿಸುವಂತೆ ಸೇವೆ ಮಾಡುವವರು ತೀರಾ ಕಡಿಮೆ ಮಂದಿ. ಇಂತಹ ಕಥಾವಸ್ತುವುಳ್ಳ 'ಕರ್ಣ' ಝೀ ಕನ್ನಡದಲ್ಲಿ ಪ್ರಸಾರವಾಗುತ್ತಿದೆ.

ಟೀವಿಗೂ ಮುನ್ನ ಒಟಿಟಿಯಲ್ಲಿ ಪ್ರಸಾರವಾದ ಮೊದಲ ಕನ್ನಡ ಧಾರಾವಾಹಿ. 'ಕನ್ನಡತಿ' ಖ್ಯಾತಿಯ ಕಿರಣ್ ರಾಜ್ (ಕರ್ಣ), ಜೊತೆಗೆ ಭವ್ಯ ಗೌಡ (ನಿಧಿ), ನಮ್ರತಾ ಗೌಡ (ನಿತ್ಯಾ) ಪ್ರಮುಖ ಪಾತ್ರದಲ್ಲಿದ್ದಾರೆ. ನಾಯಕ ಪ್ರಸೂತಿ ತಜ್ಞ. ಆತ ಹಣ, ರಾಜಕೀಯ ಆಗಲಿ ಆಸ್ಪತ್ರೆಯ ಆಡಳಿತಾಧಿಕಾರಿ ಒತ್ತಡಕ್ಕೂ ಮಣಿಯಲ್ಲ. ರೋಗಿಗಳ ಅಗತ್ಯಕ್ಕೆ ಸ್ಪಂದಿಸುವ ಸೂಕ್ತ ಚಿಕಿತ್ಸೆ ನೀಡುವ ಮೂಲಕ ನಂಬರ್ ಒನ್ ವೈದ್ಯ ಎಂದು ಖ್ಯಾತಿ ಪಡೆದಿದ್ದಾರೆ. ವೃತ್ತಿಪರತೆಯನ್ನು ಗೌರವಿಸುವ ಇಂತಹ ಧಾರಾವಾಹಿಗಳು ಹೆಚ್ಚೆಚ್ಚು ಬರಲಿ.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಅವಾಸ್ತವ ಚಿತ್ರಣ

ಝೀ ಕನ್ನಡದ 'ಬ್ರಹ್ಮಗಂಟು'ನಲ್ಲಿ ರೂಪಾ ಮನೆ ಬಿಟ್ಟು ಹೋಗಿ, ತನಗೆ ಗೊತ್ತಿಲ್ಲದಂತೆ ತನ್ನ ಮನೆ ಸೇರುತ್ತಾಳೆ. ಕೆಲಸದಾಳು ರೂಪದಲ್ಲಿ, ಸದಾ ಮುಸುಕು ಹಾಕಿಕೊಂಡಿರುವ ರೂಪಾ ಬಗ್ಗೆ ತಂದೆ, ತಾಯಿ, ಅಣ್ಣ, ತಂಗಿ, ಅತ್ತಿಗೆ ಸೇರಿದಂತೆ ಯಾರಿಗೂ ಆಕೆ ರೂಪಾ ಎನ್ನುವುದು ಗೊತ್ತಾಗುವುದಿಲ್ಲವೇ? ಅಪರಿಚಿತರು ಕೆಲಸಕ್ಕೆ ಬಂದರೆ ಅವರ ಪೂರ್ವಾಪರ ವಿಚಾರಿಸದೆ ಇಂದು ಯಾರಾದರೂ ಕೆಲಸವನ್ನು ಕೊಡುತ್ತಾರಾ? ಮುಸುಕು ತೆಗೆಯದ ಕೆಲಸದವಳ ಬಗ್ಗೆ ಅನುಮಾನ ಬರುವುದಿಲ್ಲವೇ? ಇಷ್ಟೊಂದು ಅವಾಸ್ತವವನ್ನು ಪ್ರೇಕ್ಷಕರು ನಂಬಬೇಕೆ?

—ಸಿ.ಕೆ. ಗಣಪ್ಪನವರ ಮುಂಡರಗಿ

## ವಾರದ ಪತ್ರ

### ಕೃತಕ ಬುದ್ಧಿಮತ್ತೆಯ ವೈಭವ

ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ 'ಕರ್ಣ' ಝೀ ವಾಹಿನಿಯಲ್ಲಿ ಲವಲವಿಕೆಯಿಂದ ಪ್ರದರ್ಶನಗೊಳ್ಳುತ್ತಿದೆ. ಕರ್ಣ ಹಾಗೂ ನಿಧಿ ಪಾತ್ರಗಳ ಲೀಲಾಜಾಲ ಅಭಿನಯ ಮುದ್ದು ಮುದ್ದಾಗಿದ್ದು ವೀಕ್ಷಿಸಲು ಖುಷಿಯೆನಿಸುತ್ತದೆ. ಆಸಕ್ತಿದಾಯಕವೂ ಆಗಿದೆ. ಅವರಿಬ್ಬರ ನಡುವೆ ಮೂಡಿಬಂದ ಕನಸಿನ ಡ್ಯುಯೆಟ್ ಹಾಡಂತೂ ಅದ್ಭುತವಾಗಿತ್ತು.

ಕೃತಕ ಬುದ್ಧಿಮತ್ತೆಯ ಸಹಾಯದಿಂದ ರೂಪಿಸಿರುವ ಜಲಪಾತದ ರಮಣೀಯ ದೃಶ್ಯ, ಆಗಸದಲ್ಲಿ ಮೇಘಮಾಲೆಯ ವಿಹಂಗಮ ನೋಟ ಮನಮೋಹಕವಾಗಿತ್ತು. 'ಆರಂಭದಲ್ಲಿ ಗೋಣಿಯನ್ನೂ ಎತ್ತಿ ಎತ್ತಿ ಒಗೆದ' ಎಂಬಂತೆ ಧಾರಾವಾಹಿಯ ಪ್ರಾರಂಭ ಚೆನ್ನಾಗಿದೆ. ಮುಂದೆ ಖಳನಾಯಕಿಯರ ಸಂಚಿಗೆ ಬಲಿಯಾಗದೆ ಇರಲಿ.

—ರಮಣ್ ಶೆಟ್ಟಿ ರೆಂಜಾಳ

## ಮನ ತಣಿಸಿದ ಪಂಜರ

ಡಿಂಕಾ ಮೂವೀಸ್‌ನಲ್ಲಿ 'ಬಂಗಾರದ ಪಂಜರ' ಸಿನಿಮಾ ಪ್ರಸಾರವಾಯಿತು. 80ರ ದಶಕದ ಅದ್ಧೂರಿ ತಾರಾಗಣದ, ಮಧುರ ಗೀತೆಗಳ ಆಕರ್ಷಣೆಯಿಂದ ಕೂಡಿತ್ತು. ರಾಜಕುಮಾರ್ ಅಭಿನಯ ಮರೆಯದ ಅನುಭವ ನೀಡಿತು. ಅಶ್ವತ್ಥ್, ಪಂಢರಿಬಾಯಿ, ಆರತಿ, ಬಾಲಕೃಷ್ಣ, ಲೋಕನಾಥ್ ಅವರ ಅಭಿನಯ ಮನ ಸೂರೆಗೊಂಡಿತು.

—ಭಾರತೀ ಗಂಗಾಧರ್, ಬೆಂಗಳೂರು

## ಕನ್ನಡದ ಮಾಸ್ತರ

ಚಂದನದ 'ಥಟ್ ಅಂತ ಹೇಳಿ' ಜನಸಾಮಾನ್ಯರಿಗೆ ಅರಿವಿನ ಪಾಠವನ್ನು ಬೋಧಿಸುತ್ತಿದೆ. ಕಾರ್ಯಕ್ರಮದ ನಿರೂಪಕ ನಾ. ಸೋಮೇಶ್ವರ ಅವರು ನಾಡು–ನುಡಿ, ಸಂಸ್ಕೃತಿ, ಇತಿಹಾಸ, ಜಾನಪದಕ್ಕೆ ಸಂಬಂಧಿಸಿದಂತೆ ಅರ್ಥಪೂರ್ಣ ಪ್ರಶ್ನೆ ಮತ್ತು ವಿವರವನ್ನು ನೀಡುತ್ತಿದ್ದಾರೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

## ಗಲಾಟೆ ಕಿಚನ್

ಕಲರ್ಸ್ ಕನ್ನಡದಲ್ಲಿ 'ಕ್ವಾಟ್ಲೆ ಕಿಚನ್' ರಿಯಾಲಿಟಿ ಶೋ ಪ್ರಸಾರವಾಗುತ್ತಿದೆ. ಇದಕ್ಕೆ ಗಲಾಟೆ ಕಿಚನ್ ಎಂದು ಹೆಸರಿಟ್ಟಿದ್ದರೆ ಹೆಚ್ಚು ಸೂಕ್ತವಾಗಿರುತ್ತಿತ್ತು. ಶೋನಲ್ಲಿ ಭಾಗವಹಿಸಿದವರೆಲ್ಲ ಅಡುಗೆಯೊಂದನ್ನು ಬಿಟ್ಟು ಉಳಿದೆಲ್ಲವನ್ನೂ ಮಾಡುತ್ತಾರೆ. ಅಡುಗೆಗಿಂತ ಹೆಚ್ಚಾಗಿ ಗಲಾಟೆಯನ್ನು ಮಾಡುತ್ತಾರೆ. ಆ ಗಲಾಟೆಯಲ್ಲಿ ಅವರೇನು ಅಡುಗೆ ಮಾಡುತ್ತಿದ್ದಾರೆ ಎಂದು ವೀಕ್ಷಕರಿಗಂತೂ ಗೊತ್ತಾಗುವುದಿಲ್ಲ. ಅಡುಗೆ ಮಾಡಲು ಚಿತ್ರವಿಚಿತ್ರವಾದ ವೇಷವನ್ನೇಕೆ ಹಾಕಬೇಕು? ಏಕೆ ಕುಣಿಯಬೇಕು? ಈ ಶೋ ನೋಡಿ ಯಾರಾದರೂ ಅಡುಗೆ ಕಲಿಯಬೇಕೆಂದರೆ ಅದು ಕನಸಿನ ಮಾತು.

—ಮುರಲೀಧರ ಕುಲಕರ್ಣಿ, ಬೀದರ್

## ಸಂತೃಪ್ತಿಯ ನಗು

ಬೀದಿ ವ್ಯಾಪಾರಿಗಳ ಬದುಕು ಬವಣೆಯೇ. ಒಂದು ನಿಶ್ಚಿತ ಆದಾಯವೆಂಬುದು ಇರುವುದಿಲ್ಲ. ಬಂದರೆ ಬಂತು ಎನ್ನುವ ರೀತಿಯ ಬದುಕು ಅವರದು. ಚಂದನ 'ಬದುಕ ಬಂಡಿ...' ಕಾರ್ಯಕ್ರಮದಲ್ಲಿ ಅಂತಹ ವ್ಯಾಪಾರಿಗಳ ಬದುಕು ಬವಣೆಯನ್ನು ತೆರೆದಿಡುತ್ತಿದೆ. ನಿರೂಪಕ ಧರ್ಮೇಂದ್ರ ಕುಮಾರ ಅವರ ಮಾತುಗಳು ಚೆಂದವೆನಿಸುತ್ತವೆ. ಇದ್ದವರೂ ಚೌಕಾಸಿ ಮಾಡುವುದನ್ನು ಕೇಳಿ ಖೇದವೆನಿಸಿತು. ಸಣ್ಣವರಿಗೆ ಸಣ್ಣ ಸಮಸ್ಯೆ ಎನ್ನುವಂತೆ ಐಷಾರಾಮಿ ಕಾರಲ್ಲಿ ಓಡಾಡುವವರ ಮುಖದ ನಗುವಿಗಿಂತ ದುಡಿಮೆಯೇ ದೇವರೆನ್ನುವ ಇಂಥವರ ಮುಖದಲ್ಲಿ ಸಂತೃಪ್ತಿಯ ನಗುವಿರುತ್ತದೆ.

—ತಾರಾ ಹೆಗಡೆ, ಶಿರಸಿ

## ಪ್ರಶಸ್ತಿಗಳ ಸುರಿಮಳೆ!

ಕಲರ್ಸ್ ಕನ್ನಡದ 'ಅನುಬಂಧ ಅವಾರ್ಡ್ಸ್'ನ ಜನ, ಮನಮೆಚ್ಚಿದ ಕಥೆ, ನಟ, ನಟಿ ಹೀಗೆ ಹಲವು ಪ್ರಶಸ್ತಿಗಳನ್ನು 'ರಾಮಾಚಾರಿ' ಬಾಚಿಕೊಂಡಿತು. ಈಗ ರಾಮಾಚಾರಿ ಕುಗ್ಗಿ ಹೋಗಿದ್ದಾನೆ. ಮನೆಯಲ್ಲಿ ಕೇವಲ ಮೂವರು ಉಳಿದುಕೊಂಡಿದ್ದಾರೆ. ಕಥೆ ಮುಂದುವರಿಕೆಗೆ ಉಳಿದ ಒಂದು ಅಸ್ತ್ರ ಮಹಿಳೆ. ಅದಕ್ಕಾಗಿ ಮಾನ್ಯತಾಳನ್ನು ಬಳಸಿಕೊಂಡು ಎಷ್ಟು ಕೆಟ್ಟವಳನ್ನಾಗಿ ಮಾಡಬೇಕೋ ಅಷ್ಟೂ ಪ್ರಯತ್ನ ಮಾಡುತ್ತಿದ್ದಾರೆ. ಗರ್ಭಸ್ಥ ಶಿಶುವಿನ ಸಂಹಾರಕ್ಕೆ ಪ್ರಯತ್ನಿಸುತ್ತಿರುವ ಕ್ರೂರಿ ಮಾನ್ಯತಾಳನ್ನು ಊಹಿಸಿಕೊಳ್ಳುವುದೇ ಅಸಾಧ್ಯ. ತಮ್ಮ ಮನೆ ಬಿಟ್ಟು ಮಾನ್ಯತಾ ಮನೆಯಲ್ಲಿ ತಳ ಊರಿರುವ ರುಕ್ಕು ಮತ್ತು ಜಿ.ಕೆ.ಯನ್ನು ದಯವಿಟ್ಟು ಅವರ ಮನೆಗೆ ಸಾಗಹಾಕಿ ಸಾಧ್ಯವಾದರೆ ಧಾರಾವಾಹಿಗೆ ಕೊನೆ ಹಾಡಿ.

—ಪುಷ್ಪಾ ಎನ್.ಕೆ. ರಾವ್, ಉಡುಪಿ